MARCH 06, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- ರಾಜ್ಯ ವಿಧಾನಮಂಡಲದ, ಮುಂದುವರೆದ ಉಪವೇಶನ ಇಂದು ಆರಂಭ; ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ, ರಾಜ್ಯದ ಮುಂಗಡಪತ್ರ ಮಂಡನೆ.
- ಸಚಿವ ಸಂಪುಟ ಸಭೆ; ಒಳ ಮೀಸಲಾತಿ ಚರ್ಚೆ ಅಪೂರ್ಣ; 56 ಸಾವಿರ ಹುದ್ದೆಗಳ ನೇಮಕಾತಿಗೆ ಯಾವುದೇ ಅಡ್ಡಿ ಇಲ್ಲ – ಎಚ್.ಕೆ. ಪಾಟೀಲ.
- ಹುಬ್ಬಳ್ಳಿಯ, ಕೆ.ಎಂ.ಸಿ. ಆರ್.ಐ., ಬಹುಶಿಸ್ತೀಯ ವೈದ್ಯಕೀಯ ಸಂಶೋಧನಾ ಘಟಕಕ್ಕೆ, ರಾಷ್ಟ್ರೀಯ ಪುರಸ್ಕಾರ.
- ರಾಜ್ಯದಲ್ಲಿ 25 ಲಕ್ಷ ಎಂ.ಎಸ್.ಎಂ.ಇ.ಗಳು; ಶೇಕಡ 25 ರಷ್ಟು ಮಹಿಳಾ ಉದ್ಯಮಿಗಳು – ರೋಹಿಣಿ ಸಿಂಧೂರಿ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯದ ಮುಖ್ಯಮಂತ್ರಿಯಾಗಿ, ಡಿ.ದೇವರಾಜ ಅರಸ ಬಳಿಕ, ಹೆಚ್ಚುಕಾಲ ರಾಜ್ಯದ ಚುಕ್ಕಾಣಿ ಹಿಡಿದ, ಸಿದ್ದರಾಮಯ್ಯ ಅವರು, ಹಣಕಾಸು ಖಾತೆ ಮಂತ್ರಿಯೂ ಆಗಿ, 17ನೇ ಬಾರಿಗೆ, 2026–27ನೇ ಸಾಲಿನ, ರಾಜ್ಯ ಮುಂಗಡಪತ್ರವನ್ನು, ಇಂದು ಬೆಳಗ್ಗೆ 10.15ಕ್ಕೆ, ಸದನದಲ್ಲಿ ಮಂಡಿಸಲಿದ್ದಾರೆ.

<><><>

ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಒಂದಾದ, ಹೆಣ್ಣುಮಕ್ಕಳ ಆರ್ಥಿಕ ಸಬಲೀಕರಣ ಹಾಗೂ ಲಿಂಗಸಮಾನತೆ ಸಾಧಿಸುವ ಧ್ಯೇಯದೊಂದಿಗೆ, ಪಂಚ ಖಾತ್ರಿ ಯೋಜನೆಗಳನ್ನು ಜಾರಿಗೊಳಿಸಿ, ಅವರು ಗಮನ ಸೆಳೆದಿದ್ದಾರೆ.

<><><>

ಒಟ್ಟು ಹೊಣೆಗಾರಿಕೆಗಳು, ಈ ತಿಂಗಳಾಂತ್ಯಕ್ಕೆ, (ಮಾರ್ಚ್ 2026ರ ವೇಳೆಗೆ), 8 ದಶಾಂಶ 1–4 ಲಕ್ಷ ಕೋಟಿ ರೂಪಾಯಿಗಳನ್ನು ದಾಟುವ ನಿರೀಕ್ಷೆಯಿದ್ದು, ಇದು ರಾಜ್ಯದ, ಒಟ್ಟು ದೇಶೀಯ ಉತ್ಪನ್ನದ, ಶೇಕಡ 26 ದಶಾಂಶ 5 ರಷ್ಟಾಗುತ್ತದೆ. ಇದು, ಕರ್ನಾಟಕ ಹಣಕಾಸಿನ ಜವಾಬ್ದಾರಿ ಕಾಯ್ದೆ, 2002ರ ಆದೇಶದ, ಶೇಕಡ 25ರ, ಅನುಮತಿಸುವ ಮಿತಿಯನ್ನು ಉಲ್ಲಂಘಿಸಲಿದೆ.

<><><>

2022–23 ಮತ್ತು 2019–20ರಲ್ಲಿ, ಮಾತ್ರ ಹೊಣೆಗಾರಿಕೆಗಳು ಶಾಸನಬದ್ಧ ಮಿತಿಯೊಳಗೆ ಉಳಿದಿದ್ದು, ಪ್ರಸಕ್ತ ಬಜೆಟ್‌ನಲ್ಲಿ, ಹೆಚ್ಚುವರಿ ಆದಾಯ ಸಂಗ್ರಹಿಸಲು, ಮುಖ್ಯಮಂತ್ರಿಯವರು, ಇಂಧನ, ಮದ್ಯ ಮತ್ತು ಆಸ್ತಿ ನೋಂದಣಿ ಮೇಲಿನ ತೆರಿಗೆಗಳನ್ನು ಹೆಚ್ಚಿಸುವ ಸಾಧ್ಯತೆ ಇದೆ ಎಂದು, ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ.

<><><>

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ರಾಜ್ಯಾದ್ಯಂತ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಅಳವಡಿಸಲಾದ, ಡಿಜಿಟಲ್ ಎಲ್.ಇ.ಡಿ. ಪರದೆಗಳ ಮೂಲಕ, ಬಜೆಟ್ ಮಂಡನೆಯ, ನೇರ ಪ್ರಸಾರ ಹಾಗೂ ಬಳಿಕ, ಮುಖ್ಯಮಂತ್ರಿಗಳ ಸುದ್ದಿಗೋಷ್ಠಿ ಸಹ ಪ್ರಸಾರ ಮಾಡಲಿದೆ.

<><><>

ಹೊಸ ದಿಲ್ಲಿಯ, ಭಾರತೀಯ ಕೃಷಿ ಅನುಸಂಧಾನ ಪರಿಷತ್ ಹಾಗೂ ಬೆಂಗಳೂರಿನ, ಭಾರತೀಯ ತೋಟಗಾರಿಕೆಸಂಶೋಧನಾ ಸಂಸ್ಥೆ ವತಿಯಿಂದ, ಹುಣಸೆ ತಳಿಗಳ ರಕ್ಷಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಸಂಪರ್ಕಗಳ ಮೂಲಕ, ಹುಣಸೆ ರೈತರ ಸಬಲೀಕರಣಕ್ಕಾಗಿ, ಏಳು ಪ್ರಮುಖ ಬೇಡಿಕೆಗಳನ್ನು ಒಳಗೊಂಡ ಪ್ರಸ್ತಾವವನ್ನು, ರಾಜ್ಯ ಸರ್ಕಾರಕ್ಕೆ, ಸಲ್ಲಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಮಂಡಿಸಲಿರುವ, 2026–27ನೇ ಸಾಲಿನ ಮುಂಗಡಪತ್ರದಲ್ಲಿ, ಹುಣಸೆ ಕೃಷಿ ಬಲವರ್ಧನೆಗೆ, ಪ್ರಾವಧಾನ ಕಲ್ಪಿಸುವಂತೆ ಕೋರಲಾಗಿದೆ.

<><><>

ತುಮಕೂರು ತಾಲೂಕು, ಹಿರೇಹಳ್ಳಿಯ, ಕೃಷಿ ವಿಜ್ಞಾನ ಕೇಂದ್ರದ, ತೋಟಗಾರಿಕಾ ತಜ್ಞ, ಪ್ರಶಾಂತ ಮಾಹಿತಿ ನೀಡಿ, ವಿಜಯನಗರ ಜಿಲ್ಲೆಯೊಂದರಲ್ಲೇ, ಈ ಮೊದಲು ಎಂಟು ಸಾವಿರಕ್ಕೂ ಹೆಚ್ಚು ಹೆಕ್ಟರ್‌ನಲ್ಲಿ ಹುಣಸೆ ವ್ಯಾಪಿಸಿತ್ತು. ಈಗ 6 ಸಾವಿರದ 800 ಹೆಕ್ಟರ್‌ಗೆ ಇಳಿಕೆ ಕಂಡಿದೆ ಎಂದಿದ್ದಾರೆ.

<><><>

ತುಮಕೂರು ಜಿಲ್ಲೆಯ, ಉತ್ಕೃಷ್ಟ ತಳಿ ಲಕ್ಷ್ಮಣ ಹುಣಸೆ ಸೇರಿದಂತೆ, ವಿವಿಧ ಬಗೆಯ ತಳಿಗಳನ್ನು, ಸಸ್ಯ ಪ್ರಬೇಧಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರದಲ್ಲಿ ನೋಂದಾಯಿಸಲಾಗುತ್ತಿದ್ದು, ಮೌಲ್ಯವರ್ಧಿತ ಹುಣಸೆ ನವೋದ್ಯಮಗಳನ್ನು ಸ್ಥಾಪಿಸಿ, ಅನುದಾನ ನೀಡಲು, ಪ್ರಸಕ್ತ ಬಜೆಟ್‌ನಲ್ಲಿ ಅವಕಾಶ ಕಲ್ಪಿಸುವಂತೆ, ತುಮಕೂರಿನ ಕೃಷಿಕ ಮಲ್ಲಿಕಾರ್ಜುನ ಹೊಸಪಾಳ್ಯ, ಹಣಕಾಸು ಮಂತ್ರಿ ಹಾಗೂ ಕೃಷಿ ಸಚಿವರಲ್ಲಿ, ಮನವಿ ಮಾಡಿದ್ದಾರೆ.

<><><>

ಮಲ್ಲಿಕಾರ್ಜುನ ಹೊಸಪಾಳ್ಯ ಧ್ವನಿ 60 ಸೆಕೆಂದುಗಳು

<><><>

'ನೇರ ನೇಮಕಾತಿಯಲ್ಲಿ, ಪರಿಶಿ ್ಟ ಪಂಗಡಗಳಿಗೆ, ಒಳ ಮೀಸಲಾತಿ ಕಲ್ಪಿಸಲು, ರಾಜ್ಯ ಸರಕಾರ ಬದ್ಧವಿದೆ; ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಅಪೂರ್ಣವಾಗಿದ್ದು, ಸದ್ಯದಲ್ಲೇ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ ತಿಳಿಸಿದ್ದಾರೆ. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಯಿತು. ಬಳಿಕ ವಿವರ ನೀಡಿದ ಸಚಿವರು, ಒಟ್ಟು 56 ಸಾವಿರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿ, ಹೊರಡಿಸಿರುವ ಆದೇಶಕ್ಕೆ, ಯಾವುದೇ ಅಡ್ಡಿ ಇಲ್ಲ ಎಂದು, ಸ್ಪಷ್ಟ ಪಡಿಸಿದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಭಾರತೀಯ ಆರೋಗ್ಯ ಸಂಶೋಧನೆ ಹಾಗೂ ಭಾರತೀಯ ವೈದ್ಯಕೀಯಸಂಶೋಧನಾ ಮಂಡಳಿಯ, ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ,ಕೆ.ಎಂ.ಸಿ. ಆರ್.ಐ. ಆವರಣದ, ಬಹುಶಿಸ್ತೀಯ ವೈದ್ಯಕೀಯ ಸಂಶೋಧನಾ ಘಟಕ ಎಂ.ಆರ್.ಯು. ದೇಶದ ಅತ್ಯುತ್ತಮ ಸಂಶೋಧನಾ ಘಟಕವೆಂಬ, ಕೀರ್ತಿಗೆ ಭಾಜನವಾಗಿದೆ. ಸಾರ್ವಜನಿಕ ಆರೋಗ್ಯ, ಹೃದ್ರೋಗಗಳು, ಅಪೌಷ್ಟಿಕತೆ ಹಾಗೂ ಕ್ಯಾನ್ಸರ್ ಸೇರಿದಂತೆ, ವಿಷಕಾರಿ ಹಾವುಗಳ ಕಡಿತಕ್ಕೆ, ವೈಜ್ಞಾನಿಕ ನಿರ್ವಹಣೆಯ, ಚಿಕಿತ್ಸಾ ವ್ಯವಸ್ಥೆ ರೂಪಿಸಿದ ಹೆಗ್ಗಳಿಕೆ, ಕೆ.ಎಂ.ಸಿ.ಯ ಬಹುಶಿಸ್ತೀಯ ವೈದ್ಯಕೀಯ ಸಂಶೋಧನಾ ಘಟಕ ಹೊಂದಿದೆ. ಘಟಕದ ನೋಡಲ್ ಅಧಿಕಾರಿ ಹಾಗೂ ಔಷಧ ವಿಜ್ಞಾನ ವಿಭಾಗದ, ಸಹ ಪ್ರಾಧ್ಯಾಪಕ, ಡಾಕ್ಟರ್ ರಾಮ ಕೌಲಗುಡ್ಡ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಡಾ.ರಾಮ ಕೌಲಗುಡ್ಡ ಧ್ವನಿ 45 ಸೆಕೆಂದುಗಳು

<><><>

ರಾಜ್ಯದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ, ಹೊರ ಗುತ್ತಿಗೆ ಹಾಗೂ ಗೌರವ ಧನದ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ, 3 ಲಕ್ಷಕ್ಕೂ ಅಧಿಕ ಸಿಬ್ಬಂದಿ ಮತ್ತು ಅವರ ಕುಟುಂಬಕ್ಕೆ, ಆರೋಗ್ಯ ಭದ್ರತೆ ಒದಗಿಸಲು, 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ; ಖಾಯಂ ಅಲ್ಲದ ನೌಕರರು, K.A.S.S. N.P.E.' ಎಂಬ, ಮಹತ್ವಾಕಾಂಕ್ಷಿ ಯೋಜನೆ, ಜಾರಿಗೊಂಡಿದೆ. ಸರ್ಕಾರಿ ನೌಕರರ ಮಾದರಿಯಲ್ಲೇ, ನಗದು ರಹಿತ ವೈದ್ಯಕೀಯ ಸೌಲಭ್ಯವನ್ನು, ಖಾಯಂ ಅಲ್ಲದ ಸಿಬ್ಬಂದಿಗೂ ಒದಗಿಸಲಾಗುತ್ತಿದೆ. ವೈದ್ಯಕೀಯ ಹಾಜರಾತಿ ನಿಯಮಗಳು, 1963ರ ಅಡಿ, ಗುತ್ತಿಗೆ, ಹೊರ ಗುತ್ತಿಗೆ ಹಾಗೂ ಗೌರವಧನದ ಆಧಾರದ ಮೇಲೆ, ಸೇವೆ ಸಲ್ಲಿಸುತ್ತಿರುವ ನೌಕರ, ಅವರ ತಂದೆ, ತಾಯಿ ಇಬ್ಬರ ಮಾಸಿಕ ಆದಾಯ, 27 ಸಾವಿರ ರೂಪಾಯಿ ಮೀರಿರಬಾರದು. ಇತರೆ ಯಾವುದೇ ಆರೋಗ್ಯ ಸೌಲಭ್ಯಕ್ಕೆ ಒಳಪಟ್ಟಿರಬಾರದು ಎಂದು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಕಾರ್ಯಕಾರಿ ನಿರ್ದೇಶಕರು, ತಿಳಿಸಿದ್ದಾರೆ.

<><><>

'ಬ್ರ್ಯಾಂಡ್ ಕರ್ನಾಟಕ' ಯೋಜನೆ ಅಡಿ, ಮಹಿಳೆಯರ ನೇತೃತ್ವದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆM.S.M.E.ಗಳಿಗೆ ವಿಶೇ ಆದ್ಯತೆ ನೀಡಿ, 4 ಸಾವಿರ ಉದ್ದಿಮೆಗಳಿಗೆ, ಬ್ರ್ಯಾಂಡಿಂಗ್, ಉತ್ಪನ್ನಗಳ ಸ್ಥಾನೀಕರಣ,ಗುಣಮಟ್ಟದ ಪ್ರಮಾಣೀಕರಣ ಮತ್ತು ಮಾರುಕಟ್ಟೆ ಪ್ರವೇಶಕ್ಕೆ ಅಗತ್ಯ ಬೆಂಬಲ ನೀಡಲಾಗುವುದು ಎಂದು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಕಾರ್ಯದರ್ಶಿ, ರೋಹಿಣಿ ಸಿಂಧೂರಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ, 'ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ' ಆಯೋಜಿಸಿದ್ದ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಪಾಲ್ಗೊಂಡು, ಮಾತನಾಡಿದರು. ರಾಜ್ಯದಲ್ಲಿ 25 ಲಕ್ಷ ಎಂ.ಎಸ್.ಎಂ.ಇ.ಗಳಿದ್ದು, ರಾಜ್ಯದ ಕೈಗಾರಿಕೆ ಮತ್ತು ಉದ್ಯೋಗ ಸೃಷ್ಟಿಯ ಬೆನ್ನೆಲುಬಾಗಿವೆ. ಶೇಕಡ 25ರ ಷ್ಟು ಉದ್ದಿಮೆಗಳನ್ನು ಮಹಿಳೆಯರೇ ಮುನ್ನಡೆಸುತ್ತಿದ್ದು, 'ಒಂದು ಜಿಲ್ಲೆ, ಒಂದು ಉತ್ಪನ್ನ'ದಡಿ,ಪ್ರಾದೇಶಿಕ ಉತ್ಪನ್ನಗಳನ್ನು ಉತ್ತೇಜಿಸಲಾಗುತ್ತಿದೆ ಎಂದರು.

<><><>

ದೇಶದ ಗಡಿ ರಕ್ಷಣೆ ವೇಳೆ, ಹುತಾತ್ಮರಾದ, ಸೈನಿಕರ ಕುಟುಂಬದವರನ್ನು, ವೀರಾಂಗನಾ ಸಮ್ಮಾನ್ ಮೂಲಕ, ಗಡಿ ಭದ್ರತಾ ಪಡೆ ಬಿ.ಎಸ್.ಎಫ್., ಬೆಂಗಳೂರು ವಿಭಾಗದ, ಇನ್ಸ್‌ಪೆಕ್ಟರ್ ಜನರಲ್, ದಿನೇಶ ಕುಮಾರ, ಗೌರವಿಸಿದರು. ಹುತಾತ್ಮ ಯೋಧರ ಪತ್ನಿಯರಿಗೆ, ಪರಿಹಾರದ ಚೆಕ್ ಹಾಗೂ ಹೊಲಿಗೆ ಯಂತ್ರಗಳನ್ನು, ನೀಡಿದರು.

<><><>

ರಾಜ್ಯದ 26 ಜಿಲ್ಲೆಗಳಿಗೆ ತಾವು ಭೇಟಿ ನೀಡಿದ್ದು, ಎಲ್ಲ 31 ಜಿಲ್ಲೆಗಳ ಪ್ರವಾಸ ಪೂರ್ಣಗೊಳಿಸಿ, ರಾಜ್ಯದ ಮಹಿಳೆಯರ ಸ್ಥಿತಿಗತಿ ಹಾಗೂ ದೌರ್ಜನ್ಯ ಪ್ರಕರಣಗಳ ಕುರಿತ, ಸಮಗ್ರ ವರದಿಯನ್ನು, ಮುಖ್ಯಮಂತ್ರಿಯವರಿಗೆ ಸಲ್ಲಿಸುವುದಾಗಿ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ, ನಾಗಲಕ್ಷ್ಮೀ ಚೌಧರಿ, ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣಗಳ ಹೆಚ್ಚುವಿಕೆಯಲ್ಲಿ, ಅಶ್ಲೀಲ ಚಿತ್ರಗಳ ವೀಕ್ಷಣೆ, ಮಾದಕ ದ್ರವ್ಯಗಳ ವ್ಯಸನ ಮುಖ್ಯ ಕಾರಣಗಳಾಗಿದ್ದು, ಸಮಾಜ ಜಾಗೃತವಾಗಬೇಕು. ಯುವಜನರ ಚಟುವಟಿಕೆ ಮೇಲೆ ಪಾಲಕರ ಕಣ್ಗಾವಲು ಮುಖ್ಯ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

- ರಾಜ್ಯ ವಿಧಾನಮಂಡಲದ, ಮುಂದುವರೆದ ಉಪವೇಶನ ಇಂದು ಆರಂಭ; ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ, ರಾಜ್ಯದ ಮುಂಗಡಪತ್ರ ಮಂಡನೆ.
- ಸಚಿವ ಸಂಪುಟ ಸಭೆ; ಒಳ ಮೀಸಲಾತಿ ಚರ್ಚೆ ಅಪೂರ್ಣ; 56 ಸಾವಿರ ಹುದ್ದೆಗಳ ನೇಮಕಾತಿಗೆ ಯಾವುದೇ ಅಡ್ಡಿ ಇಲ್ಲ – ಎಚ್.ಕೆ. ಪಾಟೀಲ.
- ಹುಬ್ಬಳ್ಳಿಯ, ಕೆ.ಎಂ.ಸಿ. ಆರ್.ಐ., ಬಹುಶಿಸ್ತೀಯ ವೈದ್ಯಕೀಯ ಸಂಶೋಧನಾ ಘಟಕಕ್ಕೆ, ರಾಷ್ಟ್ರೀಯ ಪುರಸ್ಕಾರ.
- ರಾಜ್ಯದಲ್ಲಿ 25 ಲಕ್ಷ ಎಂ.ಎಸ್.ಎಂ.ಇ.ಗಳು; ಶೇಕಡ 25 ರ ಷ್ಟು ಮಹಿಳಾ ಉದ್ಯಮಿಗಳು – ರೋಹಿಣಿ ಸಿಂಧೂರಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>